

ಬೆಳೆಸಿದ ಆರ್ಕಿಡ್‌ಗಳಿವೆ. ಅವು ಒಂದೊಂದೂ ಬೇರೆ ಬೇರೆ ಸಮಯದಲ್ಲಿ ಹೂಬಿಡುತ್ತವೆ. ಅವುಗಳನ್ನು ತಂದ ಸಂದರ್ಭ ನೆನಪಾಗಿ ಖುಷಿಯಾಗುತ್ತದೆ.

ಚಿಕ್ಕವರಿದ್ದಾಗ ನಾವು ಆಡುತ್ತಿದ್ದ ಮನೆಯಾಟಕ್ಕೆ ಚಿಕ್ಕ ಜಾಗವೇ ಸಾಕಿತ್ತು. ನಮ್ಮ ಆಟದ ಅರಮನೆ ರೂಪು ತಳೆಯುತ್ತಿತ್ತು. ಅಲ್ಲಿ ಮನೆಯ ವಸ್ತುಗಳೆಲ್ಲ ನಾವೇ ಗದ್ದೆಯ ಮಣ್ಣಿನಿಂದ ತಯಾರಿಸಿದ ನೆರಳಿನಲ್ಲಿ ಒಣಗಿಸಿದ ಪಾತ್ರೆ, ಕುಡಿಕೆ ಮಡಕೆಗಳಾಗಿರುತ್ತಿದ್ದವು. ಕುಡಿಕೆಯಲ್ಲಿ ನೀರು ತುಂಬಿ ಸಾರು ಎಂದು ಭಾವಿಸುತ್ತಿದ್ದ ದಿನಗಳು. ಸೊಪ್ಪಿನ ಚೂರುಗಳೇ ಪಲ್ಯ. ಆದರೆ ಖುಷಿಗೆ ಕಡಿಮೆಯಿಲ್ಲ. ನಮ್ಮ ಜಾಗದ ಕಲ್ಪನೆ ಸೀಮಿತವಾಗಿತ್ತು. ಆದರೆ ಅಡಿಕೆತೋಟ ಮಾಡುವ ಹುಚ್ಚು ಹಿಡಿದವರು ಪ್ರತಿವರ್ಷ ತಮ್ಮ ತೋಟವನ್ನು ಕಾಡಿನ ಕಡೆಗೆ ಒತ್ತುವರಿ ಮಾಡಿ ಸಂತೋಷಪಡುತ್ತಾರೆ. ತೋಟದ ಪಕ್ಕದ ಧರೆಯನ್ನು ಕೊರೆದು ಆ ಮಣ್ಣನ್ನು ತೋಟದ ಬೇಸಾಯಕ್ಕೆ ಬಳಸಿ ತೋಟದ ಜಾಗವನ್ನು ಹೆಚ್ಚಿಸುತ್ತಿರುತ್ತಾರೆ. ಹೀಗೆ ಹೊಸದಾಗಿ ಸೇರಿಸಿದ ಜಾಗಕ್ಕೆ ಅಡಿಕೆ ಸಸಿ ನೆಡುತ್ತಾರೆ. ಹೀಗೆ ಎರಡು ಇದ್ದಿದ್ದು ನಾಲ್ಕು ಎಕರೆ ಆದರೂ ಜನರಿಗೆ ಸಮಾಧಾನವಿಲ್ಲ. ಹೀಗೆ ಗುಡ್ಡ ಕೊರೆದು ತೋಟ ಮಾಡಲು ಈಗ ಜೆಸಿಬಿಯಂತಹ ಬೃಹತ್ ಯಂತ್ರಗಳ ಸಹಾಯವೂ ಇದೆ. ಆದರೆ, ಈ ಸಲದ ಮಾರಿಮಳೆ ಹೀಗೆ ಕೊರೆದ ಗುಡ್ಡಗಳನ್ನು ತೋಟದ ಮೇಲೆ ರಸ್ತೆಯ ಮೇಲೆ ಬೀಳಿಸಿ ಜನಗಳಿಗೆ ಬುದ್ಧಿ ಕಲಿಸಿದೆ ಪ್ರಕೃತಿ.

ಇನ್ನೊಮ್ಮೆ ನನ್ನ ಶ್ರೀಮಂತ ಬಂಧುವೊಬ್ಬರು ಇಷ್ಟು ಚಿಕ್ಕ ಮನೆ ಕಟ್ಟಿಕೊಂಡಿದ್ದೀರಲ್ಲ ಅಂತ ಆಶ್ಚರ್ಯ ವ್ಯಕ್ತಪಡಿಸಿದರು. ನಮ್ಮ ಅಗತ್ಯಕ್ಕೆ ಇಷ್ಟೇ ಸಾಕು ಅಂದೆ ನಾನು. ಈಗಂತೂ ಕೊರೊನಾ ಸಮಯದಲ್ಲಿ ಆಸ್ತಿ, ಐಶ್ವರ್ಯ ಎಷ್ಟೇ ಇದ್ದರೂ ಆರೋಗ್ಯ ಇಲ್ಲದಿದ್ದರೆ ಏನು ಪ್ರಯೋಜನವಿಲ್ಲ ಎಂಬುದು ಜನರಿಗೆ ಮತ್ತೆ ಮತ್ತೆ ಮನದಟ್ಟಾಗಿದೆ. ಕಣ್ಣೆದುರಿಗೇ ಪರಿಚಿತರು, ಬಂಧುಮಿತ್ರರು ಕೊರೊನಾಕ್ಕೆ ಬಲಿಯಾದಾಗ 'ಜಾಗ ಎಷ್ಟಿದ್ದರೂ ಪ್ರಯೋಜನ ಇಲ್ಲ' ಎಂಬುದು ತಿಳಿದಿದೆ. ಆದರೂ ಜನ ಇನ್ನೊಬ್ಬರು ತಮಗಿಂತ ಕಡಿಮೆ ಅಂತ ಹೇಳಿ ಮನನೋಯಿಸಿ ಸಂತೋಷಪಡುವ ಹಿಂಸಾನಂದ ಬಿಡುವುದಿಲ್ಲ.

ಅಮೃತಾ ಪ್ರೀತಮ್ ತಮ್ಮ ಆತ್ಮಚರಿತ್ರೆಗೆ 'ರಸೀದಿ ಟಿಕೆಟ್' ಎಂದು ಹೆಸರಿಟ್ಟ ಸಂದರ್ಭ ಸ್ವಾರಸ್ಯಕರವಾಗಿದೆ. ತಾನು ಅನುಭವ ಕಥನ ಬರೆಯುತ್ತಿದ್ದೇನೆ ಅಂತ ಸ್ನೇಹಿತ ಖುಷ್ವಂತ್ ಸಿಂಗ್ ಅವರಿಗೆ ಅಮೃತಾ ಅವರು ಹೇಳಿದಾಗ, 'ನಿನ್ನ ಅನುಭವ ಏನು ಮಹಾ. ಒಂದು ರಸೀದಿ ಸ್ಟ್ಯಾಂಪ್ ಮೇಲೆ ಬರೆಯಬಹುದು' ಎಂದವರು ಲಘುವಾಗಿ ಹೇಳಿದರಂತೆ. ಆ ಪ್ರತಿಕ್ರಿಯೆಯಿಂದ ಪ್ರೇರಿತರಾಗಿಯೇ ಅಮೃತಾ ಪ್ರೀತಮ್ ಅವರು ತಮ್ಮ ಆತ್ಮಚರಿತ್ರೆಗೆ 'ರಸೀದಿ ಟಿಕೆಟ್' ಎನ್ನುವ ಹೆಸರಿಟ್ಟಿದ್ದಾರೆ. ಎಷ್ಟೋ ಸಲ ಚಿಕ್ಕ ಊರಿನಲ್ಲಿರುವ ಮುಗ್ಧರು ಉದಾರವಾಗಿರುತ್ತಾರೆ. ದೇಶ ವಿದೇಶ ಸುತ್ತಿದ ಹಲವರು ಸಂಕುಚಿತವಾಗಿರುವುದನ್ನು ನಾನೇ ನೋಡಿದ್ದೇನೆ. ಅಮೆರಿಕದಂತಹ ಅತ್ಯಾಧುನಿಕ ಸಮಾಜದಲ್ಲಿದ್ದರೂ, ಮಾತುಮಾತಿಗೂ ನಮ್ಮ ಜನರಲ್ಲಿ ಹಾಗೆ, ನಮ್ಮ ಜನರಲ್ಲಿ ಹೀಗೆ, ಅವರೂ ನಮ್ಮವರೇ ಅನ್ನುವುದು, ಬೇರೆಯವರನ್ನು ಇತರೆಯವರೂ ಎಂದು ಕೀಳುಗಳೆಯುವುದು... ಇವರಿಗೆ ಎಷ್ಟು ದೊಡ್ಡ ಮನೆಯಿದ್ದರೂ ಬುದ್ಧಿ ಮಾತ್ರ ಸಾಸಿವೆ ಗಾತ್ರ. ನಾನು ಹುಟ್ಟಿ ಬೆಳೆದ ಊರಿನಲ್ಲಿಯೇ ಕೆಲಸ ಮಾಡಿ ನಿವೃತ್ತಳಾಗಿದ್ದೇನೆ. ಕೋಶ ಬೇಕಾದಷ್ಟು ಓದಿದ್ದರೂ ದೇಶ ಸಾಕಷ್ಟು ಸುತ್ತಲಿಲ್ಲ ಎಂಬ ನಿರಾಶೆ ಈ ಕೋವಿಡ್ ಕಾಲದ ಜ್ಞಾನೋದಯದಲ್ಲಿ ಇಲ್ಲವಾಗಿದೆ.

ನನ್ನ ಮನೆ ಅಂಗಳ ಎಷ್ಟೇ ಚಿಕ್ಕದಿದ್ದರೂ ಅದು ನನ್ನ ದಿನದ ಸಮಯವನ್ನು ಆಹ್ಲಾದದಿಂದ ತುಂಬಿದೆ. ನನ್ನ ಗಿಡಗಳು ಸ್ನೇಹಿತರನ್ನು ದೊರಕಿಸಿಕೊಟ್ಟಿವೆ. ಅಂಗೈ ಅಗಲದ ಜಾಗವೇ ನನ್ನ ಜೀವವೂ ಜೀವನವೂ ಆಗಿದೆ. ನಾವು ನಮ್ಮ ಅಗತ್ಯಕ್ಕೆ, ಆಸೆಗೆ ಕಡಿವಾಣ ಹಾಕಿಕೊಂಡರೆ ಎಕರೆಗಟ್ಟಲೆ ಜಾಗದ ಅಗತ್ಯವಿಲ್ಲ ಎಂದು ಮನದಟ್ಟಾಗಿದೆ.

ಪ್ರತಿಕ್ರಿಯಿಸಿ: feedback@sudha.co.in